<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ**. 287/2017**</u>

ಚಾಸಾ-18 ಪ್ರಾಸಾ-7

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 08-09-2025

| | | |
|---|---|---|
| ಹೆಸರು | : | ಸಂಗಮೇಶ ಪಾಟೀಲ |
| ತಂದೆಯ ಹೆಸರು | : | ಪರಗೌಡ |
| ವಯಸ್ಸು | : | 45 ವರ್ಷ |
| ಉದ್ಯೋಗ | : | Police Inspector |
| ವಾಸಸ್ಥಳ | : | ವಿಜಯಪುರ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ಮೇ 2015 ರಿಂದ 09-07-2017 ರವರೆಗೆ ಅಫಜಲಪೂರ ವೃತ್ತ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ದಿಃ 14-02-2017 ರಂದು ಚಾಸಾ 17 ರವರಿಂದ ಪಡೆದಿರುತ್ತೇನೆ. ಅದೇ ದಿನ ಚಾಸಾ 1 ರವರ ಮರುಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ 1 ರವರು ತೋರಿದ ಅಪಘಾತ ಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಗುನ್ನೆ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಅದೇ ದಿನ ಸದರಿ ಪಂಚರ ಸಮಕ್ಷಮ ಮೋಟರ ಸೈಕಲ ಜಪ್ತಿ ಪಡಿಸಿಕೊಂಡಿರುತ್ತೇನೆ. ಚಾಸಾ 6 ರಿಂದ 11 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 18-02-2017 ರಂದು ಸಾಯಂಕಾಲ 7 ರಿಂದ 7-30 ರವರೆಗೆ ಚಾಸಾ 4 ಮತ್ತು 5 ರವರ ಸಮಕ್ಷಮ ಅಪಘಾತ ಪಡಿಸಿದ ಲಾರಿಯನ್ನು ಜಪ್ತಿ ಮಾಡಿರುತ್ತೇನೆ ಮತ್ತು ಸದರಿ ವಾಹನದ ದಾಖಲೆಗಳನ್ನು ಪಡೆದಿರುತ್ತೇನೆ.

ದಿಃ 21-02-2017 ರಂದು ಆರೋಪಿತನಿಂದ ಇಂಡೆಮನಿಟಿ ಬಾಂಡ ಪಡೆದು ಲಾರಿ ಬಿಡುಗಡೆ ಮಾಡಿರುತ್ತೇನೆ. ದಿಃ 02-03-2017 ರಂದು ಚಾಸಾ 8 ರವರಿಂದ ಇಂಡೆಮನಿಟಿ ಬಾಂಡ ಪಡೆದು ಮೋಟರ ಸೈಕಲ ಬಿಡುಗಡೆ ಮಾಡಿರುತ್ತೇನೆ. ದಿಃ 25-03-2017 ರಂದು RTO ರವರಿಂದ MV ವರದಿ ಪಡೆದಿರುತ್ತೇನೆ. ನಂತರ ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಗುನ್ನೆ ಸ್ಥಳ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಗುನ್ನೆ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-**10** ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**10**(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಲಾರಿ ಮತ್ತು ಮೋಟರಸೈಕಲನ ಜಪ್ತಿ ಪಂಚನಾಮೆಗಳನ್ನು ತೋರಿಸಿದ್ದು ಅವುಗಳನ್ನು ಈಗಾಗಲೇ ನಿಪಿ **11** ಮತ್ತು **12** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-**11**(ಸಿ) ಮತ್ತು ನಿಪಿ **12**(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ಲಾರಿ ಮತ್ತು ಮೋಟರಸೈಕಲನ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ **1** ರಿಂದ **8** ಎಂದು ಗುರುತಿಸಲಾಗಿದೆ.

ಸಾಕ್ಷಿಗೆ MV ವರದಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, MV ವರದಿಯನ್ನು ಈಗಾಗಲೇ ನಿಪಿ-**15** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**15**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಲಾರಿ ಮತ್ತು ಮೋಟರಸೈಕಲಗಳಿಗೆ ನೀಡಿದ ಇಂಡೆಮನಿಟಿ ಬಾಂಡಗಳನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಇಂಡೆಮನಿಟಿ ಬಾಂಡಗಳನ್ನು ಈಗಾಗಲೇ ನಿಪಿ-**16** ಮತ್ತು **17** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**16**(ಎ) ಮತ್ತು ನಿಪಿ **17**(ಎ) ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **PBP** ವಕೀಲರಿಂದಃ-</u>

ಅಪಘಾತಕ್ಕೆ ಒಳಗಾದ ವಾಹನಗಳ ಜಪ್ತಿ ಪಂಚನಾಮೆಯನ್ನು ಗುನ್ನೆ ಸ್ಥಳದಲ್ಲಿ ಮಾಡುತ್ತಾರೆ ಎಂದರೆ ಸಾಕ್ಷಿ ಮೋಟರ ಸೈಕಲಗೆ ಸಂಬಂಧಿಸಿದ ಜಪ್ತಿ ಪಂಚನಾಮೆಯನ್ನು ಗುನ್ನೆ ಸ್ಥಳದಲ್ಲಿ ಮಾಡಿದ್ದು ಮತ್ತು ಲಾರಿಯ ಜಪ್ತಿ ಪಂಚನಾಮೆಯನ್ನು ಠಾಣೆಯಲ್ಲಿ ಮಾಡಲಾಗಿದೆ ಎಂದು ನುಡಿಯುತ್ತಾರೆ.

ಲಾರಿ ಮತ್ತು ಮೋಟರ ಸೈಕಲ ಜಪ್ತಿ ಪಂಚನಾಮೆಗಳನ್ನು ಏಕಕಾಲಕ್ಕೆ ಸ್ಥಳದಲ್ಲಿ ಮಾಡಲು ಏನು ತೊಂದರೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯೂ ಅಪಘಾತ ಪಡಿಸಿದ ನಂತರ ಲಾರಿಯುಾ ಬೇರೆ ಸ್ಥಳದಲ್ಲಿ ಇತ್ತು ಆದ್ದರಿಂದ ಗುನ್ನೆಸ್ಥಳದಲಿ ಮಾಡಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ಅಪಘಾತಪಡಿಸಿದ ಲಾರಿಯೂ ಗುನ್ನೆ ಸ್ಥಳದಿಂದ 2 ಕಿ.ಮಿ. ದೂರದಲ್ಲಿ ನಿಂತಿತ್ತು. ಜಪ್ತಿ ಪಡಿಸಿಕೊಂಡ ಲಾರಿಯೇ ಅಪಘಾತಪಡಿಸಿದೆ ಎಂದು ಹೇಳಲು ಏನು ಸಾಕ್ಷಿ ಇದೆ ಎಂಬ ಪ್ರಶ್ನೆಗೆ ಸಾಕ್ಷಿದಾರ ಅದರಿ ಕುರಿತು ಸಾಕ್ಷಿದಾರರ ಹೇಳಿಕೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಲಾರಿ ನಿಂತ ಸ್ಥಳದಲ್ಲಿ ಜಪ್ತಿ ಪಂಚನಾಮೆ ಮಾಡಲು ಏನು ತೊಂದರೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯೂ ಲಾರಿಯ ಚಾಲನೆ ಮತ್ತು ಅದರ ಕೀ ಇಲ್ಲದೇ ಇರುವುದರಿಂದ ಮಾಡಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ಒಂದು ಪ್ರಕರಣದಲ್ಲಿ ಒಳಗೊಂಡ ಯಾವುದೇ ವಾಹನವನ್ನು ಪೋಲಿಸ ಕಬ್ಜಾ ವಶಕ್ಕೆ ಕೊಳ್ಳಬೇಕಾದರೆ ಪಂಚನಾಮೆ ಮಾಡಬೇಕಾಗುತ್ತದೆ ಎಂದರೆ ಸರಿ. ನಾನು RTO ರವರಿಗೆ ಸಲ್ಲಿಸಿದ ಮನವಿ ದಿನಾಂಕ ನನಗೆ ನೆನಪಿಲ್ಲ. ಆದರೆ ನಾನು ಲಾರಿ ವಶಕ್ಕೆ ತೆಗೆದುಕೊಂಡ 2 ದಿನಗಳಲ್ಲಿ ಮನವಿ ಮಾಡಿರುತ್ತೇನೆ. RTO ರವರ ಪರೀಕ್ಷೆ ವರದಿಬರುವವರೆಗೆ ವಾಹನ ಬಿಡುಗಡೆ ಮಾಡಬಾರದೆಂದು ನಿಯಮ ಇರುತ್ತದೆ ಎಂದರೆ ಸರಿಯಲ್ಲ. ಚಾಸಾ 17 ರವರಿಂದ ಕಡತ ಪಡೆದುಕೊಂಡು ಈ ಪ್ರಕರಣದ ಮುಂದಿನ ತನಿಖೆ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣೆ ಪಟ್ಟಿಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ